### 43. ಸರಳವಾಗಿ ಬಸವ ಜಯಂತಿ ಆಚರಣೆ : ಸಾಮಾಜಿಕ ಮಾಧ್ಯಮಗಳಲ್ಲಿ ಗೌರವ ಸಂದೇಶ

ಮಹಾಮಾನವತಾವಾದಿ ವಿಶ್ವಗುರು ಬಸವೇಶ್ವರರ ಜಯಂತಿಯನ್ನು ನಗರದಾದ್ಯಂತ ಸರಳವಾಗಿ ಆಚರಿಸಲಾಯಿತು. ಲಾಕ್‌ಡೌನ್ ಹಿನ್ನೆಲೆಯಲ್ಲಿ ಯಾವುದೇ ವೇದಿಕೆ ಕಾರ್ಯಕ್ರಮ ಅಥವಾ ಮೆರವಣಿಗೆ ನಡೆಯಲಿಲ್ಲ. ಬಸವಣ್ಣನ ಅನುಯಾಯಿಗಳು ಬಸವೇಶ್ವರರ ಭಾವಚಿತ್ರಕ್ಕೆ ಹೂವಿನ ಹಾರ ಹಾಕಿ ದೀಪ ಹಚ್ಚಿ ಮನೆಗಳಲ್ಲಿಯೇ ನಮಿಸಿದರು.

ವಚನ ಜ್ಯೋತಿ ಬಳಗ, ಬಸವ ಸಮಿತಿ, ಕೆಪಿಸಿಸಿ, ಜಯ ಕರ್ನಾಟಕ ಸಂಘಟನೆ ಶ್ರೀ ಜಗಜ್ಯೋತಿ ಬಸವೇಶ್ವರ ಸಮಿತಿ ಹೀಗೆ ನಾನಾ ಸಂಸ್ಥೆಗಳು ಬಸವ ಜಯಂತಿಯನ್ನು ತಮ್ಮ ಕಛೇರಿಗಳಲ್ಲಿ ಅತ್ಯಂತ ಸರಳವಾಗಿ ಆಚರಿಸಿದವು.

ಬಸವ ಸಮಿತಿ ವತಿಯಿಂದ ನಗರದ ಬಸವ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಗಜ್ಯೋತಿ ಬಸವೇಶ್ವರರ ಪುತ್ಥಳಿಗೆ ಮುಖ್ಯಮಂತ್ರಿಯವರು ಮತ್ತು ಮೇಯರ್ ಗೌತಮ್ ಕುಮಾರ್ ಪುಷ್ಪನಮನ ಸಲ್ಲಿಸಿದರು. ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ, ಗೃಹ ಸಚಿವ ಬಸವರಾಜ ಬೊಮ್ಮಾಯಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಉಪ ಮೇಯರ್ ರಾಮಮೋಹನ ರಾಜು, ಚಿತ್ರದುರ್ಗದ ಮುರುಘಾಮಠದ ಡಾ: ಶಿವಮೂರ್ತಿ ಮುರುಘಾ ಶರಣರು, ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಹಾಗೂ ಇತರರು ಉಪಸ್ಥಿತರಿದ್ದರು.

ಕೋವಿಡ್–19 ಪರಿಹಾರ ನಿಧಿಗೆ ಬಸವ ಸಮಿತಿ ವತಿಯಿಂದ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ರೂ.2.51 ಲಕ್ಷ ಮೊತ್ತದ ಚೆಕ್ ಅನ್ನು ಮುಖ್ಯಮಂತ್ರಿಯವರಿಗೆ ನೀಡಲಾಯಿತು.

ಆಧಾರ:ಪ್ರಜಾವಾಣಿ, ದಿನಾಂಕ:27.04.2020.